ದಿನಾಂಕಃ22.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ- ಶ್ರೀ. ಟಿ.ಬಿ.ಎಂ. ವಕೀಲರಿಂದ ಪ್ರತಿವಾದಿ ಪರ ಃ-**

ನಾನು ರಿಯಲ್ ಎಸ್ಟೇಟ್ ಮಾಡುತ್ತೇನೆ ಎಂದರೆ ಸರಿ. ನಾನು ಜಮೀನುಗಳನ್ನು ತೆಗೆದುಕೊಂಡು ಸಾವಿರಾರು ನಿವೇಶನಗಳನ್ನು ಮಾಡಿ ಮಾರಾಟ ಮಾಡಿರುತ್ತೇನೆ ಎಂದರೆ ಸಾಕ್ಷಿ ನೂರಾರು ಮಾಡಿರುತ್ತೇನೆ ಎನ್ನುವರು. ಸದರಿ ನಿವೇಶನಗಳನ್ನು ಮಾಡುವ ಸಲುವಾಗಿ ಉಪನೊಂಧಣಿ ಕಛೇರಿ, ತಾಲ್ಲೂಕು ಕಛೇರಿ ನಗರಸಭೆಗೆ ಅನೇಕ ಬಾರಿ ಹೋಗಬೇಕು ಎಂದರೆ ಸರಿ. ಅ ಕಾರಣ ನನಗೆ ಅಧಿಕಾರಿಗಳ ಜೊತೆ ಒಡನಾಟ ಇರುತ್ತದೆ ಎಂದರೆ ಸರಿ.

1980 ನೇ ಇಸವಿಯಲ್ಲಿ ಯಾರು ಸರಕಾರಿ ಜಾಗದಲ್ಲಿ ಅಂದರೆ ನಗರಸಭಾ ವ್ಯಾಪ್ತಿಯಲ್ಲಿ ಅನೇಕ ವರುಷಗಳಿಂದ ನಿವೇಶನ ಸ್ವಾಧೀನ ಹೊಂದಿರುವವನ್ನು ಸಕ್ರಮ ಮಾಡಬೇಕೆಂದು ಹೇಳಿ ಒಂದು ನಡವಳಿಕೆ ಮಾಡಿ ಸರಕಾರಕ್ಕೆ ಅನುಮತಿಗೆ ಕಳುಹಿಸಿಕೊಡಲಾಗಿತ್ತು ಎಂದರೆ ಗೊತ್ತಿಲ್ಲ. ಅದರಂತೆ ಒಂದು ಸಮಿತಿಯನ್ನು ರಚಿಸಿ ತನಿಖೆ ಮಾಡಿದಾಗ 913 ನಿವೇಶನಗಳು ಅ ರೀತಿ ಇರುವುದು ಕಂಡು ಬಂದಿದ್ದು, ಅದರ ಮೇಲೆ ಜಿಲ್ಲಾಧಿಕಾರಿಗೆ ಸರಕಾರದ ಅನುಮತಿ ಪಡೆಯಲು ವರದಿ ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ಅನುಮತಿ ಪಡೆದುಕೊಂಡ ನಂತರ ಅವರಿಂದ ಅಪಸೆಟ್ ಪ್ರೈಸ್ ಪಡೆದುಕೊಂಡು ಅವರಿಗೆ ಹಕ್ಕು ಪತ್ರ ನೊಂಧಣಿ ಮಾಡಲಾಗಿರುತ್ತದೆ ಎಂದರೆ ಗೊತ್ತಿಲ್ಲ.

ಸಾವಿರಾರು ಜನರು ಅಕ್ರಮ ಸ್ವಾಧೀನ ಹೊಂದಿದ್ದರು ಎಂದರೆ ಗೊತ್ತಿಲ್ಲ. ಕಂದಾಯ ವಸೂಲಿ ಮಾಡುವ ಸಲುವಾಗಿ ಒಂದು ಖಾತೆಯನ್ನು ಸಹ ಪುರಸಭೆಯವರು ಇಟ್ಟಿದ್ದರು ಎಂದರೆ ಗೊತ್ತಿಲ್ಲ.

ಅಗಸರ ದಾನಪ್ಪ ರವರು ಸಾಗರದ ಸುಭಾಷ ನಗರದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಸದರಿ ಅಗಸರ ದಾನಪ್ಪ ರವರು ಅಣಲೆಕೊಪ್ಪ ಬಡವಣೆಯಲ್ಲಿ ಸರಕಾರಿ ಜಾಗದಲ್ಲಿ ಅಕ್ರಮವಾಗಿ ಒಂದು ಗುಡಿಸಲನ್ನು ಕಟ್ಟಿಸಿಕೊಂಡು ಬೇಲಿ ಹಾಕಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು ಅಕ್ರಮವಾಗಿರುವುದಿಲ್ಲ ಪುರಸಭೆಯಿಂದ ದಾಖಲೆ ನೀಡಿರುತ್ತಾರೆ ಅವರು ಮನೆ ಕಟ್ಟಿಕೊಂಡಿರುತ್ತಾರೆ ಎನ್ನುವರು. ಅವರು ಮನೆ ಕಟ್ಟಲು ಪರವಾನಿಗೆ ಪಡೆದಿದ್ದರಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ಅವರು ಅಕ್ರಮವಾಗಿ ಗುಡಿಸಲು ಕಟ್ಟಿದ ಕಾರಣ 20*15 ಅಡಿ ಮಾತ್ರ ಕಂದಾಯ ವಸೂಲಿ ಮಾಡುವ ಮಟ್ಟಿಗೆ ಮಾತ್ರ ಅವರಿಗೆ ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಯಾವ ವರುಷದಲ್ಲಿ ಮೃತಪಟ್ಟಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ತಂದೆ ತೀರಿ ಹೋದ ನಂತರ ದಾನಪ್ಪ ದಾವ ಸ್ವತ್ತಿನಲ್ಲಿ ಇದ್ದ ಎಂದು ತಿಳಿದು ಬಂದಿರುತ್ತದೆ. ದಳವಾಯಿ ಪರಮೇಶ್ವರಪ್ಪ ರವರಿಗೆ ಸಾಗರದ ಲಿಂಗಾಯತ ಬೀದಿಯಲ್ಲಿ ಒಂದು ದೊಡ್ಡ ಮನೆ ಇರುತ್ತದೆ ಎಂದರೆ ಸರಿ. ಅವರು ಸರಕಾರಿ ಜಾಗದಲ್ಲಿ ಅಕ್ರಮವಾಗಿ ಕಟ್ಟಿರುವ ಮನೆಗಳನ್ನು

ಖರೀದಿ ಮಾಡಿ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿರುತ್ತಾರೆ ಎಂದು ಹೇಳಿ ಅವರ ಮೇಲೆ 5-6 ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಗೊತ್ತಿಲ್ಲ. ಸರಕಾರಿ ಜಾಗದಲ್ಲಿ ಇರುವ ಕಟ್ಟಡಗಳನ್ನು ಮಾತ್ರ ಖರೀದಿ ಮಾಡಬಹುದು ಎಂದು ಅನುಮತಿ ನೀಡಲಾಗಿದೆ ಅಥವಾ ನೊಂಧಣಿ ಮಾಡಬಹುದಾಗಿತ್ತು ಎಂದರೆ ಗೊತ್ತಿಲ್ಲ.

ಸರಕಾರಿ ಜಾಗ ಮಾರಾಟ ಅಥವಾ ಹಕ್ಕು ಪತ್ರ ನೀಡಬೇಕಾದರೆ ಸರಕಾರದಿಂದ ಅನುಮತಿ ಪಡೆಯಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ದಾವ ಎ ಶೆಡ್ಯೂಲ್ ಸ್ವತ್ತಿನ ಬೆಲೆ ಸುಮಾರು 25-30 ಲಕ್ಷ ಇರಬಹುದು. ದಾನಪ್ಪ ರವರು ಅಗಸರ ಜಾತಿಗೆ ಸೇರಿರುತ್ತಾರೆ ಮತ್ತು ಪರಿಶಿಷ್ಟ ಜಾತಿಗೆ ಬರುವುದಿಲ್ಲ ಎಂದರೆ ಸರಿ. ಉಚಿತವಾಗಿ ನಿವೇಶನಗಳು ಬೇಕಾದಾಗ ಸರಕಾರದಿಂದ ಅನುಮತಿ ಬೇಕು ಎಂದರೆ ಗೊತ್ತಿಲ್ಲ. ಸಾಮಾನ್ಯವಾಗಿ 20*30 ಅಡಿ ಬಡವರಿಗೆ ಅಶ್ರಯ ಯೋಜನೆ ಅಡಿಯಲ್ಲಿ ನೀಡಲಾಗುತ್ತದೆ ಎಂದರೆ ಸರಿ. 50*150 ಅಡಿ ಜಾಗವನ್ನು ಸಾಗರದ ಮದ್ಯ ಭಾಗದಲ್ಲಿ ಯಾರಿಗಾದರೂ ಮಂಜೂರು ಮಾಡಿದ ಬಗ್ಗೆ ನಿಮಗೆ ತಿಳಿದಿದಿಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುವರು.

ಸಾಮಾನ್ಯವಾಗಿ ಯಾರಿಗಾದರೂ ನಿವೇಶನ ಮಂಜೂರು ಮಾಡಬೇಕಾದರೆ ಒಂದು ಮಿಟಿಂಗ್ ಕರೆದು ನಡವಳಿಕೆ ಮಾಡಿ ಸದರಿ ಅನುಮತಿಗಾಗಿ ಜಿಲ್ಲಾಧಿಕಾರಿಗೆ ಕಳುಹಿಸಿಕೊಡಲಾಗುತ್ತದೆ ಎಂದರೆ ಸರಿ. ಅಲ್ಲಿಂದ ಅನುಮತಿ ಬಂದ ನಂತರ ನಿವೇಶನ ನೀಡಲು ಒಂದು ಠರಾವು ಮಾಡುತ್ತಾರೆ ಎಂದರೆ ಸರಿ. ಸೇಲ್ ಸರ್ಟಿಫಿಕೇಟನ್ನು ಚೀಫ್ ಆಫಿಸರ್ ಬರೆದು ಕೊಡಲು ಅಧಿಕಾರ ಇರುತ್ತದೆ. ಮೇಲೆ ಹೇಳಿದಂತೆ ದಾವ ಎ ಶೆಡ್ಯೂಲ್ ಸ್ವತ್ತನ್ನು ದಾನಪ್ಪ ರವರಿಗೆ ಸರಕಾರದ ಅನುಮತಿ ಪಡೆದುಕೊಂಡು ಮಂಜೂರು ಮಾಡಿದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ಪುರಸಭೆಯಲ್ಲಿ ಸಹ ಠಾರವು ಅಥವಾ ನಡವಳಿಕೆ ಮಾಡಿಕೊಂಡ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿ.

ದಾನಪ್ಪರವರಿಗೆ ಯಾವ ಅಧಾರದ ಮೇಲೆ ಖಾತೆ ವರ್ಗಾವಣೆ ಮಾಡಿರುತ್ತಾರೆ ಎಂದು ಮ್ಯೂಟೇಶನ್ ಇರುವುದಿಲ್ಲ. ಅದರ ಸಂಬಂಧಪಟ್ಟ ದಾಖಲೆಗಳನ್ನು ತೆಗೆಸಲು ಪ್ರಯತ್ನ ಪಟ್ಟಿರುವುದಿಲ್ಲ ಎಂದರೆ ಸರಿ. ದಾನಪ್ಪ ರವರು ಬರೆದುಕೊಟ್ಟಿರುವ ದಾನಪತ್ರದ ಮಾಹಿತಿಯಂತೆ ದಳವಾಯಿ ಪರಮೇಶ್ವರಪ್ಪ ರವರಿಗೆ ಖಾತೆ ವರ್ಗಾವಣೆಯಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ದಳವಾಯಿ ಪರಮೇಶ್ವರಪ್ಪ ರವರಿಂದ ದಾವ ಎ ಶೆಡ್ಯೂಲ್ ಸ್ವತ್ತನ್ನು ನನ್ನ ತಂದೆ ದಾನಪತ್ರದಿಂದ ಖರೀದಿ ಮಾಡಿರುತ್ತಾರೆ. ನನ್ನ ತಂದೆ ಖರೀದಿ ಮಾಡಿದ ನಂತರ ಎಷ್ಟು ವರುಷಗಳಿಗೆ ಖಾತೆಯಾಗಿತ್ತು ಎಂದು ನಮಗೆ ಗೊತ್ತಿಲ್ಲ. ನಾನು ನನ್ನ ತಂದೆ ತೀರಿ ಹೋದ ನಂತರ ಅಕ್ರಮವಾಗಿ ಇತ್ತಿಚೆಗೆ ನನ್ನ ತಂದೆ ಹೆಸರಿಗೆ ಖಾತೆ ವರ್ಗಾವಣೆಯನ್ನು ಪುರಸಭೆಯಲ್ಲಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಮ್ಯೂಟೇಶನ್ ಇಲ್ಲದೇ ಕಂದಾಯ ಅಧಿಕಾರಿಯೊಂದಿಗೆ ಶಾಮೀಲಾಗಿ ಸುಳ್ಳು ಖಾತೆಯನ್ನು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ಸಾಗರದ ಎಂ.ಎಲ್.ಎ. ಗೋಪಾಲಕೃಷ್ಣ ರವರು ಸಂಬಂಧದಲ್ಲಿ ನನ್ನ ತಮ್ಮ ಎಂದರೆ ಸರಿ. ನನ್ನ ದಾಖಲೆಗಳನ್ನು ಮಾಡಿಸುವ ಸಂಧರ್ಭದಲ್ಲಿ ಅವರೇ ಎಂ.ಎಲ್.ಎ. ಆಗಿದ್ದರು ಎಂದರೆ ಸರಿಯಲ್ಲ. ಕಾಗೋಡು ತಿಮ್ಮಪ್ಪ ರವರು ನನ್ನ ಸಹೊದರ ಮಾವ ಮತ್ತು ಕಂದಾಯ ಸಚಿವರಾಗಿದ್ದರು ಎಂದರೆ ಸರಿ. ಅವರ ಪ್ರಭಾವಗಳನ್ನು ಉಪಯೋಗಿಸಿಕೊಂಡು ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಭೊಜಪ್ಪ ರವರು ನಗರಸಭಾ ಸದಸ್ಯರಾಗಿದ್ದು ಅವರು ಕ್ರಯ ಪತ್ತಕ್ಕೆ ಸಾಕ್ಷಿಯಾದ ಕಾರಣ ನನ್ನ ತಂದೆ ದಾವ ಸ್ವತ್ತನ್ನು ಖರೀದಿ ಮಾಡಿರುತ್ತಾರೆ.

ದಾವ ಬಿ ಮತ್ತು ಸಿ ಶೆಡ್ಯೂಲ್ ಗಳನ್ನು ಸರಕಾರದಿಂದ ಅನುಮತಿ ಪಡೆದುಕೊಂಡು 2 ನೇ ಪ್ರತಿವಾದಿ ಸ್ವಾಧೀನದಲ್ಲಿ ಇತ್ತು ಅ ಕಾರಣ ಅತನಿಗೆ ನೊಂಧಣಿ ಕ್ರಯ ಸರ್ಟಿಫಿಕೇಟ್ ನೀಡಲಾಗಿತ್ತು ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅಕ್ರಮವಾಗಿ ನೀಡಲಾಗಿತ್ತು ಎನ್ನುವರು. ಕೆರಿಯಪ್ಪ ರವರಿಗೆ ಒಟ್ಟು 5 ಮಕ್ಕಳಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ